UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Monday
16-11-2026

10 ಎಕರೆ ಪ್ರದೇಶದಲ್ಲಿ 75 ವೈವಿಧ್ಯಮಯ ಬೆಳೆ : ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರಗೋಷ್ಠಿ

ಜಿಕೆವಿಕೆ: ಕೃಷಿಮೇಳ ಇಂದು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮೇಳಕ್ಕೆ ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರವು ಸಜ್ಜಾಗಿದ್ದು, ನ.16ರಿಂದ ನ.18ರವರೆಗೆ ನಡೆಯಲಿದೆ. 10 ಎಕರೆ ಪ್ರದೇಶದಲ್ಲಿ 75 ವೈವಿಧ್ಯಮಯ ಬೆಳೆ ಹಾಗೂ ಬರ ಸಹಿಷ್ಣು ತಳಿಗಳನ್ನು ಬೆಳೆಯಲಾಗಿದೆ.

ಬೆಳಿಗ್ಗೆ 10ಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೃಷಿ ಮೇಳ ಉದ್ಘಾಟಿಸಲಿದ್ದಾರೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆ ವಹಿಸುವರು. ಕೃಷಿ ವಸ್ತು ಪ್ರದರ್ಶನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಲಿದ್ದು, ಕೃಷಿ ಸಚಿವ ಪಿ.ಎಂ. ನರೇಂದ್ರ ಸ್ವಾಮಿ ಅವರು ನೂತನ ತಳಿಗಳನ್ನು ಬಿಡುಗಡೆ ಮಾಡುವರು.

ಕೇಂದ್ರ ಸಚಿವ ವಿ.ಸೋಮಣ್ಣ ಅವರು 17ರಂದು ಪ್ರಶಸ್ತಿಗಳನ್ನು ಪ್ರದಾನ ಮಾಡುವರು. ಸಚಿವರಾದ ಕೆ.ಎಚ್.ಮುನಿಯಪ್ಪ, ಎಚ್. ಸಿ.ಬಾಲಕೃಷ್ಣ, ಪುಟ್ಟರಂಗಶೆಟ್ಟಿ ಪಾಲ್ಗೊಳ್ಳುವರು. ಸಮಾರೋಪವು 18ರಂದು ಮಧ್ಯಾಹ್ನ 2.30ಕ್ಕೆ ನಡೆಯಲಿದ್ದು, ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರು ರೈತ ಪ್ರಶಸ್ತಿಗಳನ್ನು ಪ್ರದಾನ ಮಾಡುವರು. ಸಚಿವರಾದ ರಾಮಲಿಂಗಾರೆಡ್ಡಿ, ಎಸ್.ಎಸ್.ಮಲ್ಲಿಕಾರ್ಜುನ, ಭೈರತಿ ಸುರೇಶ್, ಕೆ.ಎಸ್.ಬಸವಂತಪ್ಪ ಪಾಲ್ಗೊಳ್ಳುವರು.

ಬರ ನಿರ್ವಹಣೆ ತಂತ್ರಜ್ಞಾನಕ್ಕೆ ಮೇಳದಲ್ಲಿ ಆದ್ಯತೆ ನೀಡಲಾಗಿದ್ದು, ಬರ ಪರಿಸ್ಥಿತಿಗೆ ಸೂಕ್ತವಾದ ಬೆಳೆಗಳು, ಇಳುವರಿ ಹೆಚ್ಚಳ, ಎಲ್‌ನಿನೊ ಪರಿಣಾಮ, ಹವಾಮಾನ ವೈಪರೀತ್ಯ, ಮಳೆ ನೀರು ಸಂರಕ್ಷಣೆ, ಭವಿಷ್ಯದ ಕೃಷಿ, ಕೀಟ ವಿಸ್ಮಯ, ಮಧು ವನ ಕುರಿತು ಪ್ರಾತ್ಯಕ್ಷಿಕೆಗಳನ್ನು ಸಂಪನ್ಮೂಲ ವ್ಯಕ್ತಿಗಳು ನಡೆಸಿಕೊಡುವರು.

ವಿಜ್ಞಾನಿಗಳಾದ ಎಂ.ಎನ್. ತಿಮ್ಮೇಗೌಡ, ಜಿ.ಎಸ್.ಶ್ರೀನಿವಾಸ ರೆಡ್ಡಿ, ಜೆ.ಮೊಹಮ್ಮದ್ ಅಹ್ಮದ್, ಆರ್.ನಾಗರಾಜ, ಬಿ.ಎಲ್. ಮಂಜುನಾಥ್, ಆರ್.ಎಚ್.ಪಾಟೀಲ, ಪ್ರಗತಿಪರ ಕೃಷಿಕರಾದ ಬಸವರಾಜು, ಶ್ರೀವತ್ಸ ಗೋವಿಂದರಾಜು ವಿಚಾರ ಮಂಡಿಸುವರು.

ರೈತರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ತಜ್ಞರ ಸಲಹಾ ಕೇಂದ್ರವನ್ನು ತೆರೆಯಲಾಗಿದ್ದು, ಸಿರಿಧಾನ್ಯ, ಸೂರ್ಯಕಾಂತಿ, ಹೂ ಗಿಡಗಳ ತಾಕುಗಳನ್ನು ಬೆಳೆಸಲಾಗಿದೆ.

ಮುಖ್ಯಾಂಶಗಳು

- ಮೂರು ದಿನ ಮೇಳದ ಸಂಭ್ರಮ
- ಬರ ಸಹಿಷ್ಣು ಕೃಷಿ ಪದ್ಧತಿ ದರ್ಶನ
- ಮಧುವನ ಕುರಿತು ಪ್ರಾತ್ಯಕ್ಷಿಕೆ



ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿರುವ ಪುಷ್ಪಕೃಷಿಯ ತಾಕು

Prajavani pg 05

ಇಂದಿನಿಂದ ಮೂರು ದಿನ ಯುಎಎಸ್‌ಬಿ ಕೃಷಿಮೇಳ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಯುಎಎಸ್-ಬಿ) 'ಕೃಷಿ ಮೇಳ-2006' ಸೋಮವಾರದಿಂದ ಬುಧವಾರವರೆಗೆ (ನ.16-18) ಮೂರು ದಿನ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ. ಕೃಷಿ ಸಚಿವ ನರೇಂದ್ರ ಸ್ವಾಮಿ ಹಾಗೂ ಇತರ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಬರ ಹಿನ್ನೆಲೆಯಲ್ಲಿ ರೈತರಿಗೆ ಹೊಸ ಮಾದರಿಯ ಬೆಳೆ ಪದ್ಧತಿ, ಬರ ನಿರ್ವಹಣೆ ತಂತ್ರಜ್ಞಾನ ಹಾಗೂ ಕೃಷಿ ನಾವೀನ್ಯತೆಯನ್ನು ಪರಿಚಯಿಸಲು 75 ವೈವಿಧ್ಯಮಯ ಬೆಳೆ/ ತಳಿಗಳನ್ನು ಪ್ರದರ್ಶಿಸಲು ವಿವಿ ವ್ಯವಸ್ಥೆ ಮಾಡಲಾಗಿದೆ. ನುರಿತ ತಜ್ಞರಿಂದ ಎಲ್‌ನಿನೋ ಪರಿಣಾಮ ಹಾಗೂ ಭವಿಷ್ಯದ ಸಿದ್ಧತೆ, ಹವಾಮಾನ ವೈಪರೀತ್ಯ ನಿವಾರಿಸಲು ಚತುರ ಕೃಷಿ ಹಾಗೂ ಮಣ್ಣು/ ನೀರು ಸಂರಕ್ಷಣೆಯ ಕುರಿತಾದ ವಿಚಾರಸಂಕಿರಣವನ್ನು ಆಯೋಜಿಸಲಾಗಿದೆ ಎಂದು ಯುಎಎಸ್-ಬಿ ಪ್ರಭಾರ ಕುಲಪತಿ ಡಾ. ವೆಂಕಟರಮಣ ಮಾಹಿತಿ ನೀಡಿದ್ದಾರೆ.

■ ಮುಖ್ಯಮಂತ್ರಿ ಶಿವಕುಮಾರ್ ಚಾಲನೆ

Vijayavani pg 03

ಇಂದಿನಿಂದ ಜಿಕೆವಿಕೆಯಲ್ಲಿ 3 ದಿನ ಕೃಷಿ ಮೇಳ

10 ಎಕರೆಯಲ್ಲಿ 75 ವೈವಿಧ್ಯಮಯ ತಳಿ ಬೆಳೆದು ಪ್ರದರ್ಶನ | ಬೆಳೆ ಪ್ರಾತ್ಯಕ್ಷಿಕೆ

ಸಂ.ಕ. ಸಮಾಚಾರ ಬೆಂಗಳೂರು

ಹೆಬ್ಬಾಳ ಸಮೀಪದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಈ ಬಾರಿ ಬರ ನಿರ್ವಹಣೆ ತಂತ್ರಜ್ಞಾನಗಳು ಹಾಗೂ ಕೃಷಿ ನಾವಿನ್ಯತೆಗಳನ್ನು ಪರಿಚಯಿಸುವ ಸಲುವಾಗಿ ಸೋಮವಾರದಿಂದ ಮೂರು ದಿನಗಳ ಕಾಲ ಕೃಷಿಮೇಳ-2026 ನಡೆಯಲಿದೆ.

10 ಎಕರೆಯಲ್ಲಿ 75 ವೈವಿಧ್ಯಮಯ ತಳಿ ಬೆಳೆದು ಪ್ರದರ್ಶನ: ಕೃಷಿಮೇಳದ ಅಂಗವಾಗಿ ರೈತರಿಗೆ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಬರ ನಿರ್ವಹಣಾ ತಂತ್ರಜ್ಞಾನಗಳು, ಬರ ಪರಿಸ್ಥಿತಿಗೆ ಸೂಕ್ತವಾದ ಬೆಳೆಗಳು ಮತ್ತು ತಳಿಗಳು, ಸೂಕ್ತ ಬೆಳೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿದೆ. ಸುಮಾರು 10 ಎಕರೆ ಪ್ರದೇಶದಲ್ಲಿ 75 ವೈವಿಧ್ಯಮಯ ಬೆಳೆ ಹಾಗೂ ತಳಿಗಳನ್ನು ವೈಜ್ಞಾನಿಕವಾಗಿ ಬೆಳೆದು ಪ್ರದರ್ಶಿಸಲು ವ್ಯವಸ್ಥೆ ಮಾಡಲಾಗಿದೆ.

ಈ ಬಾರಿ ಕೃಷಿಮೇಳದಲ್ಲಿ ವಿ.ವಿ. ಸಂಶೋಧನಾ ವಿಭಾಗಗಳು, ರಾಜ್ಯದ ಕೃಷಿ ವಿವಿಗಳು, ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳು ಭಾಗವಹಿಸಿ ತಮ್ಮ ಯೋಜನೆ ಮತ್ತು ತಂತ್ರಜ್ಞಾನಗಳನ್ನು ಪ್ರದರ್ಶಿಸಲಿದ್ದಾರೆ.

ಈ ಮೇಳದ ಮತ್ತೊಂದು ಆಕರ್ಷಣೆ ಕೀಟ ವಿಸ್ಮಯ, ಮಧುವನ, ಬಣಭೂಮಿ ಕೃಷಿ ಪ್ರಾತ್ಯಕ್ಷಿಕೆ, ಸಮಗ್ರ ಇಳುವರಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿದೆ. ಈ ಮೂರು ದಿನಗಳ ಅವಧಿಯಲ್ಲಿ ನುರಿತ ತಜ್ಞರಿಂದ ರಾಜ್ಯದಲ್ಲಿ ಕಂಡುಬಂದಿರುವ ಎಲ್ ನಿನೋ ಪರಿಣಾಮ ಹಾಗೂ ಭವಿಷ್ಯದ ಸಿದ್ಧತೆಗಳು, ಹವಾಮಾನ ವೈಪರಿತ್ಯ, ಚತುರ ಕೃಷಿ ಹಾಗೂ ಮಣ್ಣು ಮತ್ತು ನೀರು ಸಂರಕ್ಷಣೆಯ ಕುರಿತಾದ ವಿಚಾರಣಾ ಸಂಕಿರಣಗಳನ್ನು ಆಯೋಜಿಸಲಾಗಿದೆ. ರೈತರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ತಜ್ಞರ ಸಲಹಾ ಕೇಂದ್ರವನ್ನು ತೆರೆಯಲಾಗುವುದು. ಕೃಷಿಮೇಳದ ಅಂಗವಾಗಿ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ರೈತರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ತಜ್ಞರ ಸಲಹಾ ಕೇಂದ್ರವನ್ನು ತೆರೆಯಲಾಗುವುದು. ಕೃಷಿಮೇಳದ ಅಂಗವಾಗಿ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೃಷಿಮೇಳ ಉದ್ಘಾಟಿಸಲಿದ್ದಾರೆ. ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ, ಕೃಷ್ಣಬೈರೇಗೌಡ, ಕುಲಪತಿ ಡಾ.ಪಿ.ವೆಂಕಟರಮಣ ಭಾಗವಹಿಸಲಿದ್ದಾರೆ.

ಕೃಷಿ ವಸ್ತು ಪ್ರದರ್ಶನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ಅವರು ನ.17ರಂದು ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ನ.18ರಂದು ಸಮಾರೋಪ ಸಮಾರಂಭ ನಡೆಯಲಿದೆ.

S-karnataka pg 05

Hosadiganta pg 10

ಜಿಕೆವಿಕೆ ಆವರಣದಲ್ಲಿ ಕೃಷಿಮೇಳ-2026 | ಕೃಷಿ ಉಪಕರಣ, ವಿವಿಧ ಸಸ್ಯಗಳ ಪ್ರದರ್ಶನ

ಆಧುನಿಕ ಕೃಷಿ ನಾವೀನ್ಯತೆ ಅನಾವರಣ

• **ಬೆಂಗಳೂರು:** ಬರ ನಿರೋಧಕ ಬೆಳೆ ತಳಿಗಳು ಹಾಗೂ ಪ್ರಾತ್ಯಕ್ಷಿಕೆಗಳು, ಸಂಪೂರ್ಣ ತಂತ್ರಜ್ಞಾನ ಆಧಾರಿತ ಸುಮಾರು 100 ತಂತ್ರಜ್ಞಾನ ಮಳಿಗೆಗಳು, ಜಾನುವಾರುಗಳು ನಗರದ ಜಿಕೆವಿಕೆಯಲ್ಲಿ ನಡೆಯುವ ಕೃಷಿ ಮೇಳದಲ್ಲಿ ನೋಡುಗರನ್ನು ಸೆಳೆಯಲಿವೆ.

ಬರ ನಿರ್ವಹಣೆ ತಂತ್ರಜ್ಞಾನಗಳು ಹಾಗೂ ಅತ್ಯಾಧುನಿಕ ಕೃಷಿ ನಾವಿನ್ಯತೆಗಳನ್ನು ರೈತರಿಗೆ ಪರಿಚಯಿಸುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು, ಅತ್ಯಂತ ಸರಳವಾಗಿ ಜಿಕೆವಿಕೆ ಆವರಣದಲ್ಲಿ ಮೂರು ದಿನಗಳ ಕಾಲ ಕೃಷಿಮೇಳ ಹಮ್ಮಿಕೊಳ್ಳಲಾಗಿದೆ. ಇಲ್ಲಿ ಸುಮಾರು 10 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ 75ಕ್ಕೂ ಹೆಚ್ಚು ವೈವಿಧ್ಯಮಯ ಬೆಳೆ ಹಾಗೂ ತಳಿಗಳನ್ನು ವೈಜ್ಞಾನಿಕವಾಗಿ ಬೆಳೆದು ಪ್ರದರ್ಶಿಸಲು ವ್ಯವಸ್ಥೆ ಮಾಡಲಾಗಿದೆ.

ಮೇಳದ ಪ್ರಮುಖ ಆಕರ್ಷಣೆ: ಈ ಬಾರಿಯ ಕೃಷಿಮೇಳದಲ್ಲಿ ಕೀಟ ವಿಸ್ಮಯ, ಮಧುವನ, ಬಣಭೂಮಿ ಕೃಷಿ ಪ್ರಾತ್ಯಕ್ಷಿಕೆ ಹಾಗೂ ಸಮಗ್ರ ಇಳುವರಿ ಪ್ರಾತ್ಯಕ್ಷಿಕೆಗಳು ಪ್ರಮುಖ ಆಕರ್ಷಣೆಯಾಗಲಿವೆ. ಇದರೊಂದಿಗೆ, ಮೂರು ದಿನಗಳ ಕಾಲ ನುರಿತ ತಜ್ಞರ ನೇತೃತ್ವದಲ್ಲಿ ರಾಜ್ಯದಲ್ಲಿ ಕಂಡುಬಂದಿರುವ ಎಲ್ ನಿನೋ ಪರಿಣಾಮಗಳು ಮತ್ತು ಭವಿಷ್ಯದ ಸಿದ್ಧತೆಗಳು, ಹವಾಮಾನ ವೈಪರಿತ್ಯ ಚತುರ ಕೃಷಿ ಹಾಗೂ ಮಣ್ಣು ಮತ್ತು ನೀರು ಸಂರಕ್ಷಣೆಯ ಕುರಿತು ವಿಶೇಷ ವಿಚಾರಣಾ ಸಂಕಿರಣಗಳು ಜರುಗಲಿವೆ. ರೈತರ ಕೃಷಿ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲು ಪ್ರತ್ಯೇಕವಾಗಿ ತಜ್ಞರ ಸಲಹಾ ಕೇಂದ್ರವನ್ನು ಸಹ ತೆರೆಯಲಾಗಿದೆ.



ಕೃಷಿ ಮೇಳಕ್ಕೆ ಬರಲು ಬಸ್ ವ್ಯವಸ್ಥೆ

ಜಿಕೆವಿಕೆ ಪ್ರವೇಶ ದ್ವಾರದಿಂದ ರೈತರನ್ನು ಮೇಳದ ಸ್ಥಳಕ್ಕೆ ಕರೆದೊಯ್ಯಲು ಬಸ್ ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆಯೂ ಇರಲಿದೆ. ರಾಜ್ಯದ ವಿವಿಧ ಭಾಗಗಳಿಂದ ರೈತರು ಹಾಗೂ ಸಾರ್ವಜನಿಕರು ಮೇಳ ವೀಕ್ಷಣೆಗೆ ಆಗಮಿಸುವರು. ಮೇಳಕ್ಕೆ ಬರುವ ರೈತರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಇರಲಿದೆ.

ಬರ ನಿವಾರಣೆಗೆ ಪರಿಹಾರೋಪಾಯ

ಬರಗಾಲವನ್ನು ಎದುರಿಸುವ ತಂತ್ರಜ್ಞಾನ ಹಾಗೂ ಆಧುನಿಕ ಕೃಷಿ ನಾವೀನ್ಯತೆಗಳನ್ನು ರೈತರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕೃಷಿ ಮೇಳ ಒತ್ತು ನೀಡಲಿದೆ. ಈ ಬಾರಿಯ ಮೇಳವು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿದ್ದು, ಸುಮಾರು 100 ತಂತ್ರಜ್ಞಾನ ಮಳಿಗೆಗಳು ಮೇಳದಲ್ಲಿರಲಿವೆ. ಪ್ರಸ್ತುತ ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಬರ ನಿರ್ವಹಣಾ ತಂತ್ರಗಳು, ಬರ ನಿರೋಧಕ ಬೆಳೆ ತಳಿಗಳು ಹಾಗೂ ಪ್ರಾತ್ಯಕ್ಷಿಕೆಗಳನ್ನು ನಡೆಸಲಾಗುವುದು.

ಇಂದಿನಿಂದ ಮೂರು ದಿನ ಮೇಳ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ನ.16 ರಿಂದ 18ರವರೆಗೆ ಮೂರು ದಿನಗಳ ಕಾಲ ಜಿಕೆವಿಕೆ ಆವರಣದಲ್ಲಿ ಕೃಷಿಮೇಳ-2026ನ್ನು ಆಯೋಜಿಸಲಾಗಿದೆ. ನ.16 ರಂದು ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೃಷಿಮೇಳವನ್ನು ಉದ್ಘಾಟಿಸಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ, ಕೇಂದ್ರ ಸಚಿವ ಶೋಭಾ ಕರಂದ್ಲಾಜೆ, ಕೃಷಿ ವಿವಿ ಕುಲಪತಿ ಡಾ.ಪಿ.ವೆಂಕಟರಮಣ ಮುಂತಾದವರು ಉಪಸ್ಥಿತರಿರಲಿದ್ದಾರೆ.

■ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ಕೃಷಿ ಇಲಾಖೆ: ಕೃಷಿ ಮೇಳ - 2026 ಕಾರ್ಯ ಕ್ರಮ.



ಉದ್ಘಾಟನೆ : ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್. ಸಚಿವರಾದ ಪಿ. ಎಂ.ನರೇಂದ್ರ ಸ್ವಾಮಿ, ಕೃಷ್ಣ ಬೈರೇಗೌಡ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ. ಸ್ಥಳ: ಕೃಷಿ ಮೇಳ ಸಭಾಂಗಣ. ಜಿಕೆವಿಕೆ. ಬೆಳಗ್ಗೆ 11ಕ್ಕೆ.

V-karnataka pg 05

ಸಮಾವೇಶ | ರಾಷ್ಟ್ರೀಯ ಆಡಿಕೆ ತಾಂತ್ರಿಕ ಸಮಾವೇಶ | ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಪ್ರಶಸ್ತಿ ಪ್ರದಾನ

Kannadaprabha pg 04

ರೋಗನಿರೋಧಕ ಅಡಿಕೆಗೆ ಸಂಶೋಧನೆ: ಹೆಬ್ಬಾರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಡಿಕೆ ಸಸಿಗಳಲ್ಲಿ ರೋಗಬಾಧೆ ಉಂಟಾಗುವುದನ್ನು ತಡೆಗಟ್ಟಲು ರೋಗ ನಿರೋಧಕ ಸಸಿಗಳ ಅಭಿವೃದ್ಧಿಗೆ ಸಂಶೋಧನೆ ನಡೆಸಲಾಗುತ್ತಿದೆ ಎಂದು ಕಾಸರಗೋಡಿನ ಕೇಂದ್ರ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ) ನಿವೃತ್ತ ನಿರ್ದೇಶಕ ಡಾ.ಬಾಲ ಚಂದ್ರ ಹೆಬ್ಬಾರ್ ತಿಳಿಸಿದರು.

ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ಅಡಿಕೆ ತಾಂತ್ರಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಅಂಗಾಂಶಕಸಿ, ರೋಬೊಟಿಕ್ಸ್ ತಂತ್ರಜ್ಞಾನದ ಮೂಲಕ ಗುಣಮಟ್ಟದ ಅಡಿಕೆ ಸಸಿ ಅಭಿವೃದ್ಧಿಪಡಿಸುವ ಜೊತೆಗೆ ರೋಗ ನಿರೋಧಕ ಸಸಿಗಳ ಅಭಿವೃದ್ಧಿಗೂ ಸಂಶೋಧನೆ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಕ್ಯಾನ್ಸರ್ ಕುರಿತು ಸಂಶೋಧನೆ: ಅಡಿಕೆಯಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿವೆ ಎಂದು ಅಂತಾರಾಷ್ಟ್ರೀಯ ಸಂಸ್ಥೆಯೊಂದು ವರದಿ ನೀಡಿದ್ದರಿಂದ ಪರ-ವಿರೋಧದ ಚರ್ಚೆ ಈ ಹಿಂದೆ ನಡೆದಿತ್ತು. ಆದ್ದರಿಂದ ಈ ಬಗ್ಗೆ 11 ವೈದ್ಯಕೀಯ ಸಂಶೋಧನಾ ಸಂಸ್ಥೆಗಳು ಅಧ್ಯಯನ ದಲ್ಲಿಪಾಲ್ಗೊಂಡಿದ್ದು ಒಂದೂವರೆ ವರ್ಷದಲ್ಲಿ ಸ್ಪಷ್ಟ ಫಲಿತಾಂಶ ದೊರೆಯುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2021 ರಲ್ಲಿ ಅಡಿಕೆಯಲ್ಲಿ ಎಲೆ ಚುಕ್ಕಿ ರೋಗ ಕಾಣಿಸಿಕೊಂಡು ರೈತರು ಬಹಳಷ್ಟು ಸಂಕಷ್ಟ ಅನುಭವಿಸಿದರು.ಈ ಹಿನ್ನಲೆಯಲ್ಲಿ ಸಿಪಿಸಿಆರ್‌ಐನಿಂದ ರೋಗ ಪತ್ತೆ ಕೇಂದ್ರ ಪ್ರಾರಂಭಿಸಲಾಗಿದೆ. ಅಡಿಕೆ ಉತ್ಪಾದನೆ ಹೆಚ್ಚಿಸುವ ಜೊತೆಗೆ ಸುಸ್ಥಿರ ಮತ್ತು ಪರಿಸರ ಸ್ನೇಹಿ ಕೃಷಿಗೆ ಬೆಳೆಗಾರರು ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡರೆ ಅಡಿಕೆಯಲ್ಲಿ ಹೆಚ್ಚು ಇಳುವರಿ ಪಡೆಯಬಹುದು. ಗುಣಮಟ್ಟ ವಿಲ್ಲದ ಬೀಜಗಳಿಂದ ತಯಾರಿಸಿದ ಸಸಿಗಳು ರೈತರಿಗೆ ಸಮಸ್ಯೆ ತಂದೊಡ್ಡುತ್ತಿವೆ. ಪ್ರತಿಕೂಲ ಹವಾಮಾನವೂ ಇಳುವರಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ತಿಳಿಸಿದರು.



ಕ್ವೀನ್ಸ್‌ರಸ್ತೆಯ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಅಡಿಕೆ ತಾಂತ್ರಿಕ ಸಮಾವೇಶದಲ್ಲಿ ಹಲವು ಸಾಧಕರನ್ನು ಗೌರವಿಸಲಾಯಿತು.

ಕ್ಯಾಂಪ್ಕೋ ಅಧ್ಯಕ್ಷ ಸತೀಶ್‌ಚಂದ್ರ, ಮ್ಯಾಮ್‌ಕೋಸ್ ಉಪಾಧ್ಯಕ್ಷ ಎಚ್.ಎನ್. ಮಹೇಶ್, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಎಚ್.ಎಲ್.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ಸಾಧಕರಿಗೆ ಪ್ರಶಸ್ತಿ ಪ್ರದಾನ: ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಡಾ.ಆಡಿವೆಪ್ಪ ನಾಗರಾಜ, ಡಾ.ಎಂ.ಜಿ.ಬಸವನಗೌಡ, ಡಾ. ಬಿ.ಎಸ್.ಹರೀಶ್, ಡಾ.ಎಂ.ಎನ್. ವೇಣುಗೋಪಾಲ, ಡಾ.ವೆಂಕಟರಮಣ ಹೆಗಡೆ, ಡಾ.ಸುನೀಲ ಡಿ ತಮಗೊಳೆ, ಪ್ರಸಾದ್ ರಾಮ ಹೆಗಡೆ, ವಿಷ್ಣು ಹೆಗಡೆ, ಕೆ.ನಾಗರಾಜು ಅವರಿಗೆ ಇದೇ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಜೀವಾಮೃತವೇ ಜೀವಾಳ!

ಕಂಪ್ಯೂಟರ್ ಸೈನ್ಸ್ ಓದಿರುವ ವೀಣಾ ಹೆಗಡೆ, ಆರಂಭದಲ್ಲಿ 15 ಸಾವಿರ ರೂ. ಬಂಡವಾಳದಿಂದ ಶುರು ಮಾಡಿದ ನರ್ಸರಿಗೆ ಪ್ರಸ್ತುತ ತೊಡಗಿಸಿದ ಬಂಡವಾಳವೇ 35 ಲಕ್ಷ ರೂ. ಆಗಿದೆ. ತಮ್ಮಲ್ಲಿ ಸಿದ್ಧಪಡಿಸುವ ಗಿಡಗಳಿಗೆ ಜೀವಾಮೃತ ಮಾಡಿಕೊಂಡು 3-4 ದಿನಕ್ಕೊಮ್ಮೆ ಹಾಯಿಸಲಾಗುತ್ತಿದೆ. ಸಸಿ ಮಾರಾಟದಿಂದ ಪ್ರತಿವರ್ಷ ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ.

ಸಮೃದ್ಧ ಜೀವನಕ್ಕೆ ನರ್ಸರಿ ಆಧಾರ!

15 ಸಾವಿರದಿಂದ ಶುರುವಾಗಿ 35 ಲಕ್ಷ ರೂ. ವರೆಗೆ ಬೆಳೆದ ಉದ್ಯಮ

ಜಿ.ಎಸ್.ಹೆಗಡೆ, ಹಾಸ್ಯರ (ಯಲ್ಲಾಪುರ)

ಗ್ರಾಮೀಣ ಮಹಿಳೆಯರು ಮನೆ ಕೆಲಸ, ಕೈತೋಟದ ಕೆಲಸದ ಜತೆಗೆ ತಮ್ಮಿಷ್ಟದ ಉದ್ಯಮ ಕಾರ್ಯದಲ್ಲಿ ತೊಡಗಿಕೊಂಡರೆ ಆತ್ಮತೃಪ್ತಿಯಿಂದ ಬದುಕಲು ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ ಹೆಬ್ಬೈಮನೆಯ ಗೃಹಿಣಿ ವೀಣಾ ಹೆಗಡೆ. ಶಿರಸಿ ತಾಲೂಕಿನ ಹೆಬ್ಬೈಮನೆ ಎಂಬ ಊರು ಅರೇಕಟ್ಟಾ ಕತ್ತಿಯಿಂದ (ವಾನಳ್ಳಿ-ಹುಲೇಕಲ್ ಮಾರ್ಗ) ಮೂರು ಕಿ.ಮಿ.ದೂರದಲ್ಲಿದೆ. ನರ್ಸರಿ ಉದ್ಯೋಗದಲ್ಲಿ ವಿಶಿಷ್ಟ ಸಾಧನೆ ಮಾಡುತ್ತಾ ಉತ್ತಮ ಬದುಕು ಕಟ್ಟಿಕೊಂಡಿರುವ ವೀಣಾ ಮಾಬ್ಲೇಶ್ವರ ಹೆಗಡೆ ಅವರ ಮನೆಯ ಸುತ್ತಮುತ್ತ ಸುಂದರ ನಿಸರ್ಗವಿದೆ. ಮನೆ ಹಿಂಭಾಗದಲ್ಲಿ ಮುಗಿಲೆತ್ತರದ ಗುಡ್ಡವಿದೆ. ಅಂತಹ ಜಾಗದಲ್ಲಿ ಅಷ್ಟಷ್ಟೇ ಸಮತಟ್ಟು ಜಾಗ ಮಾಡಿಕೊಂಡು ನರ್ಸರಿ ಮಾಡುತ್ತಿರುವ ಇವರ ಪರಿಶ್ರಮ ಮೆಚ್ಚಲೇಬೇಕು.

2013-14 ರಲ್ಲಿಯೇ ಸಣ್ಣ ಪ್ರಮಾಣದಲ್ಲಿ ನರ್ಸರಿ ಕೆಲಸಕ್ಕೆ ಧುಮುಕಿ ಅಡಿಕೆ, ಕಾಳುಮೆಣಸಿನ ಗಿಡ ಬೆಳೆಸುತ್ತಿದ್ದರು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಇರುವಷ್ಟೇ ಜಾಗದಲ್ಲಿ ನರ್ಸರಿ ಆರಂಭ ಮಾಡಿದ್ದರು. ಶುರುವಿನಲ್ಲಿ ಮನೆಯ ಅಡಿಕೆಯನ್ನೇ ಮೊಳಕೆಗೆ ಬಳಸಿಕೊಂಡರೆ, ಪ್ರಗತಿಪರ ರೈತರ ತೋಟದಿಂದ ಮೆಣಸಿನ ಅಂಬು ಕುಡಿಗಳನ್ನು ಬಳಸಿಕೊಳ್ಳುತ್ತಿದ್ದರು. ಈ ಕೆಲಸದಲ್ಲಿ ತಮ್ಮನ್ನು ಅರ್ಪಿಸಿಕೊಂಡು ವಿಜ್ಞಾನಿಗಳ ಸಲಹೆ, ಅನುಭವಿ ಕೃಷಿಕರ ಮಾಹಿತಿ ಆಳವಡಿಸಿಕೊಂಡು ಉದ್ಯಮದಲ್ಲಿ ಇನ್ನಷ್ಟು ಪ್ರೌಢಿಮೆ ಸಾಧಿಸಿದರು. ಮನೆಯ ಒಳಗಿನ ಕೆಲಸದ ಜತೆಗೆ ನರ್ಸರಿ ಕಾಯಕವನ್ನು ಇನ್ನಷ್ಟು ವಿಸ್ತರಿಸಬೇಕೆಂಬ ಅಭಿಲಾಷೆಯೂ ಪುಟಿದೆದ್ದಿತ್ತು. ಐದು ವರ್ಷದಲ್ಲಿ ಹೊರಗಿನ ಮಾರುಕಟ್ಟೆಯ ಬಗ್ಗೆಯೂ ಅರಿತುಕೊಂಡರು. ಜನರ ಅಪೇಕ್ಷೆ, ಇಷ್ಟಪಡುವ ಗಿಡ, ತಳಿಯನ್ನು ಕಲಿಹಾಕಿದರು. ಆ ದಿನದಲ್ಲಿಯೇ ನರ್ಸರಿ ಗಿಡಗಳಿಗೆ ಉತ್ತಮ ಬೇಡಿಕೆ ಇರುವುದನ್ನು ಗ್ರಹಿಸಿದ ಇವರು 2018-19 ರಲ್ಲಿ ಉದ್ಯಮ ವಿಸ್ತರಿಸಲು ಯೋಜನೆ ರೂಪಿಸಿದರು.

ಕುಟುಂಬದವರ ಸಹಾಯದೊಂದಿಗೆ ಅಡಿಕೆ, ಕಾಳುಮೆಣಸಿನ ಜೊತೆಗೆ ಏಲಕ್ಕಿ, ದಾಳ್ಚಿನ್ನಿ, ಜಾಯಿಕಾಯಿ, ರಕ್ತ ಚಂದನ, ಶ್ರೀಗಂಧ, ತೆಂಗು... ಹೀಗೆ ಬೇಡಿಕೆಯ ಅನುಸಾರ ಗಿಡಗಳನ್ನು ಬೆಳೆಸುವ ಕೆಲಸ ಮಾಡಿದರು. 2019ರಲ್ಲಿ 8 ಸಾವಿರ ಮೆಣಸು, 15 ಸಾವಿರ ಅಡಿಕೆ ಸಸಿ ಮಾರಾಟ ಮಾಡಿದ್ದರು. 2021ರಲ್ಲಿ 7 ಸಾವಿರ ಲವಂಗ, 6 ಸಾವಿರ ದಾಳ್ಚಿನ್ನಿ, 8 ಸಾವಿರ ಜಾಯಿಕಾಯಿ, 25 ಸಾವಿರ ಕಾಳುಮೆಣಸು ಗಿಡಗಳನ್ನು ಮಾರಾಟ ಮಾಡಿದ ಹೆಗ್ಗಳಿಕೆ ಇವರದು. ಪ್ರಸ್ತುತ ಇವರ ಸಸ್ಯ ಸಮೃದ್ಧಿ ಪರಿಶ್ರಮ ನರ್ಸರಿ ನರ್ಸರಿಯಲ್ಲಿ 70 ಸಾವಿರ ಅಡಿಕೆ, 70 ಸಾವಿರ ಕಾಳುಮೆಣಸು, 2 ಲಕ್ಷ, ದಾಳ್ಚಿನ್ನಿ,15 ಸಾವಿರ ಲವಂಗ, 30 ಸಾವಿರ ಕಾಫಿ, 15 ಸಾವಿರ ಏಲಕ್ಕಿ, 6 ಸಾವಿರ ತೆಂಗು, 5 ಸಾವಿರ ಕೊಕ್ಕೊ ಸಸಿಗಳನ್ನು ಬೆಳೆಸಲಾಗಿದೆ. ನನ್ನ ಯಜಮಾನರು ಮಹೇಶ ಹೆಗಡೆ ದಿನ್ನೆಲುಬಾಗಿ ನಿಂತಿದ್ದರಿಂದಲೇ ಬೃಹತ್ ಪ್ರಮಾಣದಲ್ಲಿ ನರ್ಸರಿ ಬೆಳೆಯಲು ಸಹಕಾರಿಯಾಗಿದೆ ಎನ್ನುತ್ತಾರೆ ವೀಣಾ ಹೆಗಡೆ.

ಮಾರುಕಟ್ಟೆಗೆ ಮಗನ ಸಾರಥ್ಯ!: ನರ್ಸರಿ ಉದ್ಯಮದ ಮಾರುಕಟ್ಟೆಯ ವ್ಯವಹಾರದ ಸಂಪೂರ್ಣ ಜವಾಬ್ದಾರಿಯನ್ನು ವೀಣಾ ಹೆಗಡೆ ತಮ್ಮ ಹಿರಿಯ ಮಗ ಭಾರ್ಗವ ಹೆಗಡೆಗೆ ವಹಿಸಿದ್ದಾರೆ. ಯಾವ ರಾಜ್ಯದಲ್ಲಿ ಯಾವ ಗಿಡಗಳಿಗೆ ಬೇಡಿಕೆಯಿದೆ? ಅಲ್ಲಿನ ಜನರು ಯಾವ ತಳಿಗಳಿಗೆ ಆದ್ಯತೆ ಕೊಡುತ್ತಾರೆ? ಎಂಬುದನ್ನು ತಿಳಿದು ಆರ್ಡರ್ ಪಡೆದುಕೊಂಡು ಗಿಡ ಬೆಳೆಸಿ ಆ ಊರುಗಳಿಗೆ ಕಳುಹಿಸಿ ಕೊಡುತ್ತಿದ್ದಾರೆ. ಆರಂಭದ ದಿನದಲ್ಲಿ ರೈತರೇ ನಮ್ಮನ್ನು ಸಂಪರ್ಕಿಸಿ ಗಿಡಗಳನ್ನು ಒಯ್ಯುತ್ತಿದ್ದರು. ಆದರೆ ಆಗ ಗಿಡಗಳು ಹೆಚ್ಚು ಮಾರಾಟ ಆಗುತ್ತಿರಲಿಲ್ಲ. ನಂತರ ಉತ್ಪಾದನೆ ಹೆಚ್ಚಿಸಿಕೊಂಡು...ಬೇಡಿಕೆ ಬಂದ ಕಡೆ ನೇರವಾಗಿ ಹಾಗೂ ಬೇರೆ ಬೇರೆ ನರ್ಸರಿಗೆ ಗಿಡಗಳನ್ನು ಕೊಡಲು ಶುರು ಮಾಡಿದ್ದರಿಂದ ಹೆಚ್ಚು ಅನುಕೂಲವಾಗಿದೆ.



ಇಲ್ಲಿ ಸಿದ್ಧಗೊಂಡ ಗಿಡಗಳು ರಾಜ್ಯವಲ್ಲದೆ ಆಂಧ್ರ, ಕೇರಳ, ಗೋವಾ, ತೆಲಂಗಾಣ, ಮೇಘಾಲಯ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳಿಗೂ ಹೋಗಿವೆ. ಬೇಡಿಕೆಯಷ್ಟು ಗಿಡಗಳನ್ನು ಸಿದ್ಧಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮ ಬರಡು ಎಕರೆ ಜಾಗ ಸಾಧ್ಯವಾಗದೆ ಈ ವರುಷದಿಂದ ಒಂದೂವರೆ ಎಕರೆ ಜಾಗವನ್ನು ಲೀಸ್‌ಗೆ ಪಡೆದುಕೊಂಡಿದ್ದೇವೆ ಎನ್ನುತ್ತಾರೆ ಭಾರ್ಗವ ಹೆಗಡೆ.

V-karnataka pg 12


U.A.S. UNIVERSITY LIBRARY
BANGALORE
560 065

ವೈವಿಧ್ಯಮಯ ಕೃಷಿ ಸ್ವಾವಲಂಬನೆಯ ಋಷಿ

■ ಸೂರ್ಯನಾರಾಯಣ ನರಗುಂದಕರ

ಕೃಷಿಯಲ್ಲಿ ಒಂದೇ ಬೆಳೆಯನ್ನು ನಂಬಿಕೊಂಡರೆ ಪ್ರಕೃತಿಯ ಏರಿಳಿತದೊಂದಿಗೆ ಆದಾಯವೂ ಏರುಪೇರಾಗುತ್ತದೆ. ಒಂದೇ ಜಮೀನಿನಲ್ಲಿ ಹಲವು ಬೆಳೆಗಳು, ಹೈನುಗಾರಿಕೆ, ಕುರಿ-ಕೋಳಿ ಸಾಕಾಣಿಕೆ, ಜೇನು ಸಾಕಣೆ ಹಾಗೂ ತೋಟಗಾರಿಕೆಯನ್ನು ಸಮನ್ವಯಗೊಳಿಸಿದರೆ ಕೃಷಿಯನ್ನೇ ಸುಸ್ಥಿರ ಆದಾಯದ ಮೂಲವನ್ನಾಗಿಸಿಕೊಳ್ಳಬಹುದು ಎಂಬುದನ್ನು ಮಾಡಿ ತೋರಿಸಿದ್ದಾರೆ ಗದಗ ತಾಲೂಕಿನ ಕೃಷಿಕ ಮಹಿಳೆ ಪುಷ್ಪಾ ಜಂಕ್ಷಿ.

ತಮ್ಮ 1.37 ಹೆಕ್ಟೇರ್ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಿರುವ ಪುಷ್ಪಾ ಜಂಕ್ಷಿ, ಕೃಷಿಯ ವಿವಿಧ ಚಟುವಟಿಕೆಗಳನ್ನು ಒಂದಕ್ಕೊಂದು ಪೂರಕವಾಗಿ ಬೆಳೆಸಿದ್ದಾರೆ. ಕೃಷಿ ಹೊಂಡಗಳ ನಿರ್ಮಾಣ, ಎರೆಹುಳು ಗೊಬ್ಬರ ತಯಾರಿಕೆ, ಜೇನು ಸಾಕಾಣಿಕೆ, ಹೈನುಗಾರಿಕೆ, ಕುರಿ ಹಾಗೂ ಕೋಳಿ ಸಾಕಾಣಿಕೆಯೊಂದಿಗೆ ತರಕಾರಿ ಮತ್ತು ಹಣ್ಣಿನ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ಎಲ್ಲ ಚಟುವಟಿಕೆಗಳ ಮೂಲಕ ಪ್ರತಿ ತಿಂಗಳು ಅಂದಾಜು 25 ಸಾವಿರದಿಂದ 30 ಸಾವಿರದವರೆಗೆ ಆದಾಯ ಗಳಿಸುತ್ತಿದ್ದಾರೆ.



ಹೈನುಗಾರಿಕೆಯೂ ಕೃಷಿಯ ಭಾಗ

ಕೃಷಿಯೊಂದಿಗೆ ಪಶುಸಂಗೋಪನೆಯಲ್ಲಿಯೂ ಒಲವು ಹೊಂದಿರುವ ಪುಷ್ಪಾ ಅವರು ಜವಾರಿ ಮಲೆನಾಡು, ಗಿಡ್ಡ ಹಾಗೂ ದೇವಣಿ ತಳಿಯ ಆಕಳುಗಳ ಜತೆಗೆ ಒಂದು ಎಮ್ಮೆ ಮತ್ತು ಎರಡು ಜರ್ಸಿ ಆಕಳು ಸಾಕುತ್ತಿದ್ದಾರೆ. ಕುರಿ ಹಾಗೂ ಕೋಳಿ ಸಾಕಾಣಿಕೆಯನ್ನೂ ಕೈಗೊಂಡಿದ್ದಾರೆ. ಜಾನುವಾರುಗಳ ಮೇವಿನ ಅಗತ್ಯ ಪೂರೈಸಲು ಸುಮಾರು 20 ಗುಂಟೆ ಪ್ರದೇಶದಲ್ಲಿ ಹಸಿರು ಮೇವು ಬೆಳೆಸುತ್ತಿದ್ದಾರೆ. ಇದರಿಂದ ಹೊರಗಿನಿಂದ ಮೇವು ಖರೀದಿಸುವ ವೆಚ್ಚವನ್ನು ತಗ್ಗಿಸಿಕೊಳ್ಳುವುದರೊಂದಿಗೆ ಜಾನುವಾರುಗಳಿಗೆ ನಿರಂತರ ಆಹಾರ ಲಭ್ಯವಾಗುವಂತೆ ಮಾಡಿದ್ದಾರೆ.

ಕೃಷಿ ಎಂದರೆ ಕೇವಲ ಭೂಮಿಯಲ್ಲಿ ಬೆಳೆ ಬೆಳೆಯುವುದಷ್ಟೇ ಅಲ್ಲ; ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹಲವು ಆದಾಯದ ಮೂಲಗಳನ್ನು ಸೃಷ್ಟಿಸಿಕೊಳ್ಳುವುದೂ ಹೌದು ಎಂಬುದನ್ನು ಪುಷ್ಪಾ ಜಂಕ್ಷಿ ಸಾಧನೆ ತೋರಿಸಿಕೊಟ್ಟಿದೆ. ಮಹಿಳೆಯೊಬ್ಬರು ಕೃಷಿ, ಪಶುಸಂಗೋಪನೆ ಮತ್ತು ತೋಟಗಾರಿಕೆಯನ್ನು ಸಮನ್ವಯಗೊಳಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬಹುದು ಎಂಬುದಕ್ಕೆ ಪುಷ್ಪಾರ ಕೃಷಿ ಮಾದರಿ ಪ್ರೇರಣೆಯಾಗಿದೆ.

ತರಕಾರಿ ಬೆಳೆಗಳಿಂದ ನಿತ್ಯ ಆದಾಯ

ತಮ್ಮ ಜಮೀನಿನಲ್ಲಿ ಸೌತೆಕಾಯಿ, ಹಿರೇಕಾಯಿ, ಸೋರೆಕಾಯಿ, ಕುಂಬಳಕಾಯಿ ಸೇರಿದಂತೆ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಬೆಳೆದ ತರಕಾರಿಗಳನ್ನು ಪ್ರತಿದಿನ ಗದಗ ಮಾರುಕಟ್ಟೆಗೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದಾರೆ. ಒಂದೇ ಬೆಳೆಯ ಫಸಲಿಗಾಗಿ ತಿಂಗಳುಗಟ್ಟಲೆ ಕಾಯುವ ಬದಲು ವಿವಿಧ ತರಕಾರಿಗಳ ಮೂಲಕ ನಿರಂತರ ಆದಾಯ ಗಳಿಸುವ ಪ್ರಯತ್ನ ಅವರದು.

S-karnataka pg 10

ಎರಡು ಎಕರೆಯಲ್ಲಿ ಹಸಿರು ತೋಟ

ತೋಟಗಾರಿಕೆಯಲ್ಲಿಯೂ ವಿಶೇಷ ಆಸಕ್ತಿ ಹೊಂದಿರುವ ಪುಷ್ಪಾ ಜಂಕ್ಷಿ, ಸುಮಾರು ಎರಡು ಎಕರೆ ಪ್ರದೇಶದಲ್ಲಿ ವಿವಿಧ ಹಣ್ಣಿನ, ಔಷಧೀಯ ಹಾಗೂ ಅರಣ್ಯ ಸಸಿಗಳನ್ನು ಬೆಳೆಸಿದ್ದಾರೆ. 300 ಕರಿಬೇವು, ತಲಾ 100 ಲಿಂಬೆ, ಪೇರಲ, ಶ್ರೀಗಂಧ, ಸೀತಾಫಲ ಮತ್ತು ತೆಂಗಿನ ಸಸಿಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ. ಇದರೊಂದಿಗೆ ಬಾಳೆ, ರಾಮಫಲ, ಉತ್ತತ್ತಿ, ನೇರಳೆ, ಮಾವು, ಅಡಿಕೆ, ಸೇಬು, ಕಿತ್ತಳೆ, ಮೊಸಂಬಿ, ಹಲಸು, ನುಗ್ಗೆ, ಚಿಕ್ಕು ಹಾಗೂ ಪಪ್ಪಾಯಿ ಸಸಿಗಳನ್ನೂ ಬೆಳೆಸಿದ್ದಾರೆ. ಪರಿಸರ ಸಂರಕ್ಷಣೆಯ ಉದ್ದೇಶದಿಂದ 200 ಗಾಳಿಮರ ಹಾಗೂ ತಲಾ 100 ಮಹಾಗನಿ, ಸುಬಾಬುಲ್ ಮತ್ತು ಬಿದಿರು ಸಸಿಗಳನ್ನು ನೆಟ್ಟಿದ್ದಾರೆ. ವಿವಿಧ ಜಾತಿಯ ಸಸ್ಯಗಳ ಪೋಷಣೆಯ ಮೂಲಕ ತಮ್ಮ ಜಮೀನನ್ನು ಹಸಿರು ತೋಟವನ್ನಾಗಿ ರೂಪಿಸಿದ್ದಾರೆ.

ಕೃಷಿಯೊಂದಿಗೆ ಸಾಮಾಜಿಕ ಜವಾಬ್ದಾರಿ

ಕೃಷಿ ಚಟುವಟಿಕೆಗಳ ಜತೆಗೆ ಸಾಮಾಜಿಕ ಕ್ಷೇತ್ರದಲ್ಲಿಯೂ ಸಕ್ರಿಯರಾಗಿರುವ ಪುಷ್ಪಾ ಜಂಕ್ಷಿ, ಗದಗ ಒಕ್ಕಲಿಗೇರಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಧರ್ಮಸ್ಥಳ ಸ್ವಸಹಾಯ ಸಂಘದ ಸದಸ್ಯೆಯಾಗಿಯೂ ತೊಡಗಿಸಿಕೊಂಡಿದ್ದಾರೆ. ಪುಷ್ಪಾ ಅವರ ತೋಟದಲ್ಲಿನ ವಿವಿಧ ಸಸಿಗಳು, ಮರಗಳು ಹಾಗೂ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಲು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಭೇಟಿ ನೀಡಿ ಸಲಹೆ-ಸೂಚನೆಗಳನ್ನು ನೀಡುತ್ತಿದ್ದಾರೆ.

ಈಶಾನ್ಯ ಭಾರತದಲ್ಲಿ ಪ್ರಿಯ ಆಹಾರ | ಕಾಡಿನ ಕೀಟವೇ ಭವಿಷ್ಯದ ಸೂಪರ್ ಫುಡ್

ತುಂಬ ರುಚಿಯಂತೆ ಜೀರುಂಡೆಗಳ ಖಾದ್ಯ!

■ ಫಾಲಲೋಚನ ಆರಾಧ್ಯ ಚಾಮರಾಜನಗರ
phalalochanaradhya.ks@timesofindia.com

ಸಾಮಾನ್ಯವಾಗಿ ಕೀಟಗಳನ್ನು ಕಂಡರೆ ಮುಖ ಕಿವುಚುವುದೇ ಹೆಚ್ಚು. ಆದರೆ, ನಾವು ಕಡೆಗಣಿಸುವ ಇದೇ ಕೀಟಗಳು ಈಶಾನ್ಯ ಭಾರತದ ಕೆಲವು ರಾಜ್ಯಗಳಲ್ಲಿ ಭಕ್ಷ್ಯ ಭೋಜನದ ಆಹಾರ!

ಕೀಟ ತಜ್ಞರು ಹೇಳುವ ಪ್ರಕಾರ ಜೀರುಂಡೆಗಳೇ ಭವಿಷ್ಯದ ಜಾಗತಿಕ ಆಹಾರ ಬಿಕ್ಕಟ್ಟನ್ನು ನೀಗಿಸಬಲ್ಲ 'ಸೂಪರ್‌ಫುಡ್' ಆಗುವ ಸಾಧ್ಯತೆ ಇದೆ.

ಹೌದು, ಈಶಾನ್ಯ ಭಾರತದ ದಟ್ಟ ಹಾಗೂ ನಿಗೂಢ ಕಾಡುಗಳಲ್ಲಿ ಬುಡಕಟ್ಟು ಸಮುದಾಯಗಳು ಶತಮಾನಗಳಿಂದ ಸೇವಿಸುತ್ತಿರುವ ಬರೋಬ್ಬರಿ 75 ಜಾತಿಯ ಖಾದ್ಯ ಜೀರುಂಡೆಗಳನ್ನು ಬೆಂಗಳೂರು ಮೂಲದ 'ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಅಂಡ್ ದಿ ಎನ್ವಿರಾನ್‌ಮೆಂಟ್' (ಏಟ್ರಿ) ಸಂಸ್ಥೆಯ ಕೀಟಶಾಸ್ತ್ರಜ್ಞರು ವೈಜ್ಞಾನಿಕವಾಗಿ ದಾಖಲಿಸಿದ್ದಾರೆ.

ವಿಶ್ವವಿಖ್ಯಾತ ನೇಚರ್ ಗ್ರೂಪ್‌ನ ಪ್ರತಿಷ್ಠಿತ ಎಂಟಮಾಲಜಿ ಜರ್ನಲ್‌ಸಲ್ಲೂ ಈ ಮಹತ್ವದ ಸಂಶೋಧನಾ ವರದಿ ಪ್ರಕಟವಾಗಿದ್ದು, ಜಾಗತಿಕ ವಿಜ್ಞಾನ ಮತ್ತು ಆಹಾರ ತಜ್ಞರ ವಲಯದಲ್ಲಿ ಸಂಚಲನ ಮೂಡಿಸಿದೆ.

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ನ್ಯಾಷನಲ್ ಮಿಷನ್ ಆಫ್ ಹಿಮಾಲಯನ್ ಸ್ಟಡೀಸ್ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಈ ವಿಸ್ತೃತ ಸಂಶೋಧನೆ ಕೈಗೊಳ್ಳಲಾಗಿದೆ. ಏಟ್ರಿ ಸಂಸ್ಥೆಯ ಹಿರಿಯ ವಿಜ್ಞಾನಿ ಪ್ರಿಯದರ್ಶನನ್ ಧರ್ಮರಾಜನ್ ಅವರ ಮಾರ್ಗದರ್ಶನದಲ್ಲಿ, ಸಂಶೋಧಕರಾದ ಸ್ವಪ್ನಿಲ್ ಎಸ್. ಬೊಯಾನೆ, ಅವಿಕಾ ಧಂಡಾ, ಎ.ಪಿ.ರಂಜಿತ್ ಹಾಗೂ ಟಿ. ಶಾಂತಿಬಾಲಾ ಅವರನ್ನೊಳಗೊಂಡ ತಂಡ ಈ ಮಹತ್ವದ ಅಧ್ಯಯನ ನಡೆಸಿ, ವರದಿ ಪ್ರಕಟಿಸಿದೆ.

ಈಶಾನ್ಯ ಭಾರತದ ಅರುಣಾಚಲ ಪ್ರದೇಶ, ಮಣಿಪುರ, ಮಿಜೋರಾಂ ಹಾಗೂ ನಾಗಾಲ್ಯಾಂಡ್ ರಾಜ್ಯಗಳ 9 ಸ್ಥಳೀಯ ಬುಡಕಟ್ಟು ಸಮುದಾಯ ಸೇರಿದಂತೆ ಅಲ್ಲಿನ ಬಹುತೇಕ ಸ್ಥಳೀಯರಿಗೆ ಈ ಜೀರುಂಡೆಗಳ ಖಾದ್ಯ ಬಲು ಪ್ರಿಯವಂತೆ. ಕೀಟ ವಿಜ್ಞಾನಿಗಳು ಅಲ್ಲಿನ ಸ್ಥಳೀಯರನ್ನು ಸಂದರ್ಶಿಸಿ ಅವರ ಹೇಳಿಕೆಗಳನ್ನು ಸಹ ದಾಖಲಿಸಿದ್ದಾರೆ.

ವೈಜ್ಞಾನಿಕವಾಗಿಯೂ ದೃಢ: ದಾಖಲಾದ ಒಟ್ಟು 75 ಜಾತಿಗಳ ಪೈಕಿ, 24 ಜಾತಿಯ ಜೀರುಂಡೆಗಳು ಆಹಾರಕ್ಕೆ ಯೋಗ್ಯವೆಂದು ಜಾಗತಿಕ ಮಟ್ಟದಲ್ಲೇ ಇದೇ ಮೊದಲ ಬಾರಿಗೆ ವೈಜ್ಞಾನಿಕವಾಗಿ ದೃಢಪಟ್ಟವೆ ಎಂದು ವರದಿಯಲ್ಲಿ ತಿಳಿಸಿದ್ದಾರೆ.




ಆಹಾರ ಯೋಗ್ಯವೆಂದು ದೃಢಪಟ್ಟಿರುವ ಕೀಟಗಳು.

ಕೀಟಗಳು ಆಹಾರವೇ ಎಂಬ ಬಗ್ಗೆ ನಮ್ಮಲ್ಲಿನವರಿಗೆ ವಿಚಿತ್ರ ಎನಿಸಬಹುದು. ಆದರೆ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶದಂತಹ ಈಶಾನ್ಯ ರಾಜ್ಯಗಳು ಸೇರಿದಂತೆ ಭಾರತದ ಹಲವು ಭಾಗಗಳಲ್ಲಿ ತಲೆಮಾರುಗಳಿಂದಲೂ ಕೀಟಗಳನ್ನು ಆಹಾರವಾಗಿ ಸೇವಿಸಲಾಗುತ್ತಿದೆ. ಇವು ಪರಿಸರ ಸ್ನೇಹಿ, ಪರ್ಯಾಯ ಪ್ರೋಟೀನ್ ಮೂಲಗಳಾಗಿವೆ.

-ಸಹನಾ ಕೀಟ ತಜ್ಞೆ, ಬೆಂಗಳೂರು



ಈ ಕೀಟಗಳಲ್ಲಿ ಸಾಕಷ್ಟು ಪ್ರೋಟೀನ್ ಅಂಶ ಇರುವುದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಯೋಗ್ಯ ಆಹಾರ ಎಂಬುದು ಸಹ ಖಚಿತ.

-ಪ್ರಿಯದರ್ಶನ್
ಕೀಟ ತಜ್ಞರು, ಏಟ್ರಿ ಸಂಸ್ಥೆ



ಪೌಷ್ಟಿಕಾಂಶಗಳ ಗಣಿ

ಬೆಂಗಳೂರಿನ ಏಟ್ರಿ ಪ್ರಯೋಗಾಲಯದಲ್ಲಿ ಈ ಜೀರುಂಡೆಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ವಿಜ್ಞಾನಿಗಳೇ ಅಚ್ಚರಿಪಡುವಂತಹ ಫಲಿತಾಂಶ ಹೊರಬಿದ್ದಿದೆ. ದುಬಾರಿ ಮಾಂಸ, ಮೀನು ಮತ್ತು ಮೊಟ್ಟೆಗಳಿಗೆ ಸರಿಸಾಟಿಯಾಗಿ, ಅದಕ್ಕಿಂತಲೂ ಹೆಚ್ಚಿನ ಪೋಷಕಾಂಶಗಳು ಈ ಕೀಟಗಳಲ್ಲಿ ಅಡಗಿವೆ ಎಂಬುದು ರುಜುವಾತಾಗಿದೆ. ವಿಶ್ಲೇಷಣೆಗೆ ಒಳಪಡಿಸಲಾದ ಜೀರುಂಡೆಗಳಲ್ಲಿ ಶೇ.61ರವರೆಗೆ ಅತ್ಯುನ್ನತ ಮಟ್ಟದ ಪ್ರೋಟೀನ್ ಅಂಶ ಪತ್ತೆಯಾಗಿದ್ದು, ಅಪೌಷ್ಟಿಕತೆ ನಿವಾರಣೆಗೆ ಇವು ರಾಮಬಾಣವಾಗಬಲ್ಲವು ಎಂಬುದು ಸಾಬೀತಾಗಿದೆ. ಕೇವಲ ಪ್ರೋಟೀನ್ ಮಾತ್ರವಲ್ಲದೆ, ಮಾನವನ ದೇಹಕ್ಕೆ ಅತ್ಯಗತ್ಯವಾದ ಕಬ್ಬಿಣ, ಸತು, ಕ್ಯಾಲ್ಸಿಯಂ ಹಾಗೂ ಆರೋಗ್ಯಕರ ಕೊಬ್ಬಿನಾಮ್ಲಗಳೂ ಹೇರಳವಾಗಿರುವುದು ದೃಢಪಟ್ಟಿದೆ.

V-karnataka pg 05

Prajavani pg 10

200 ಎಕರೆಗೂ ಹೆಚ್ಚು ಜಾಗದಲ್ಲಿ ಮೇವು ಬೆಳೆ

ಬರ: ಹೈನುಗಾರರ ನೆರವಿಗೆ ಕೆಳದಿ ಶಿವಪ್ಪ ನಾಯಕ ಕೃಷಿ, ತೋಟಗಾರಿಕೆ ವಿ.ವಿ

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ರಾಜ್ಯದಲ್ಲಿನ ಬರ ಪರಿಸ್ಥಿತಿಯ ಈ ಹೊತ್ತಿನಲ್ಲಿ ರಾಸುಗಳ ಮೇವಿನ ಕೊರತೆ ನೀಗಿಸಲು ಇರುವಕ್ಕಿಯ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು ಸರ್ಕಾರದೊಂದಿಗೆ ಕೈಜೋಡಿಸಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿನ ಸಂಶೋಧನಾ ಕೇಂದ್ರಗಳ ಆವರಣದ 200 ಎಕರೆಗೂ ಹೆಚ್ಚು ಜಮೀನಿನಲ್ಲಿ ಮೇವಿನ ಹುಲ್ಲು ಬೆಳೆದು ಅದನ್ನು ರೈತರಿಗೆ ಪೂರೈಸಲು ಮುಂದಾಗಿದೆ.

ಸಂಶೋಧನಾ ಕೇಂದ್ರಗಳ ಪ್ರಾಯೋಗಿಕ ತಾಕುಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ಭತ್ತ ಸೇರಿ ವಿವಿಧ ಆಹಾರ ಬೆಳೆ ಬೆಳೆಯಲಾಗುತ್ತದೆ.

ಮಳೆ ಕೊರತೆಯ ಕಾರಣಕ್ಕೆ ವಿಶ್ವವಿದ್ಯಾಲಯದ ವ್ಯಾಪ್ತಿಯ ಜಮೀನುಗಳನ್ನು ಖಾಲಿ ಬಿಡದೆ ಮೇವು ಬೆಳೆಯಲಾಗಿದೆ. ಆಯಾ ಜಿಲ್ಲಾಡಳಿತ, ಪಶು ಸಂಗೋಪನಾ ಇಲಾಖೆಯ ಬೇಡಿಕೆ ಅನ್ವಯ ಪೂರೈಸಲಾಗುವುದು
ಪ್ರೊ.ಕೆ.ವಿ.ಧನಂಜಯ,
ಕುಲಪತಿ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

ಆದರೆ, ಈ ಬಾರಿ ಮಳೆ ಕೊರತೆ ಹಾಗೂ ಜಲಾಶಯಗಳಿಂದ ನಾಲೆಗಳಿಗೆ ನೀರು ಹರಿಸದ ಕಾರಣ ತಾಕುಗಳಲ್ಲಿ ಕಡಿಮೆ ನೀರಿನಲ್ಲಿ ಬೆಳೆಯಬಲ್ಲ ದ್ವಿದಳ ಧಾನ್ಯ ಹಾಗೂ ಮೇವಿಗಾಗುವಂತಹ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಲಾಗಿದೆ.

'ದಾವಣಗೆರೆ ಜಿಲ್ಲೆಯ ಕತ್ತಲಗೆರೆಯ ಭತ್ತ ಸಂಶೋಧನಾ ಕೇಂದ್ರದಲ್ಲಿ 60 ಎಕರೆ, ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಬಬ್ಬೂರು ಫಾರಂನಲ್ಲಿ 25 ಎಕರೆ, ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯ ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ 40 ಎಕರೆ, ಶಿವಮೊಗ್ಗದ ನವುಲೆಯಲ್ಲಿ 20 ಎಕರೆ, ಸಾಗರ ತಾಲ್ಲೂಕಿನ ಇರುವಕ್ಕಿಯಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ 30 ಎಕರೆ, ಹೊನ್ನಾವಿಲೆಯಲ್ಲಿ 20 ಎಕರೆ ಹಾಗೂ ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿನ 25 ಎಕರೆಯಲ್ಲಿ ಮೇವಿಗಾಗಿ ವಿವಿಧ ತಳಿಯ ಹುಲ್ಲು ಬೆಳೆಯಲಾಗುತ್ತಿದೆ' ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ವಿ.ಧನಂಜಯ ಹೇಳುತ್ತಾರೆ.

'ಅಕ್ಟೋಬರ್ ಕೊನೆಯಲ್ಲಿ ಬಿದ್ದ ಕೊಂಚ ಮಳೆ ಆಧರಿಸಿ ಎರಡು ಹಂತಗಳಲ್ಲಿ ಬಿತ್ತನೆ ಮಾಡಲಾಗಿದೆ. ಬಹುಶಃ ಡಿಸೆಂಬರ್ ಮೊದಲ ವಾರದಲ್ಲಿ ಕಟಾವು ಆಗಲಿದೆ. ನಂತರ ಅದನ್ನು ಒಣಗಿಸಿ ಪೆಂಡೆ ಕಟ್ಟಿ ರೈತರಿಗೆ ಪೂರೈಕೆ ಮಾಡಲಾಗುವುದು' ಎಂದರು.



ಇರುವಕ್ಕಿಯ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ತಾಕಿನಲ್ಲಿ ಮೇವಿಗಾಗಿ ಬೆಳೆದಿರುವ ಅಗಸೆ

ಕೊಳವೆಬಾವಿ ಕೊರೆಸಿಕೊಟ್ಟ ಚಿತ್ರದುರ್ಗ ಡಿಸಿ

ಬರಗಾಲದ ಸಂದರ್ಭದಲ್ಲಿ ಮೇವು ಬೆಳೆಯುವ ವಿಶ್ವವಿದ್ಯಾಲಯದ ಯೋಜನೆಗೆ ಬೆಂಬಲ ಸೂಚಿಸಿದ ಚಿತ್ರದುರ್ಗ ಜಿಲ್ಲಾಧಿಕಾರಿ ಎಸ್.ರಮ್ಯಾ, ಹಿರಿಯೂರಿನ ಬಬ್ಬೂರು ಫಾರಂನಲ್ಲಿ ಜಿಲ್ಲಾಡಳಿತದಿಂದ ಕೊಳವೆ ಬಾವಿ ಕೊರೆಸಿ ಕೊಟ್ಟಿದ್ದಾರೆ. ಆಯಾ ಭಾಗದಲ್ಲಿ ಬೆಳೆದ ಮೇವನ್ನು ಅಲ್ಲಿಯ ರೈತರ ಬೇಡಿಕೆಗೆ ಆಧರಿಸಿ ಪೂರೈಸಲಾಗುವುದು ಎಂದು ಕುಲಪತಿ ಪ್ರೊ.ಕೆ.ವಿ.ಧನಂಜಯ ಮಾಹಿತಿ ನೀಡಿದರು.

Preparing for an El Niño requires not just studying where the rain might stop, but also knowing which places have lost their ability to cope



A farmer in fields tilled in expectation of seasonal rains in the village of Namasoko in southern Malawi. THE NEW YORK TIMES

African farmers fearful as El Niño bears down

Hundreds of farmers were gathered under the village's biggest wild mango tree, summoned by the chief, when the government workers arrived with a dire warning. Drought was soon likely to hit. The farmers had better prepare.

The cause, they said, is this year's extraordinarily powerful El Niño, a global weather phenomenon born in the Pacific Ocean, half a world away from their village of Namasoko, Malawi, in southern Africa.

If the farmers bought special drought-resistant seeds, they might avoid hunger and financial despair. But a single bag costs $43. And most farmers make less than $3 per day.

"What are we to do?" asked Patrick Hareke, 46, one of the farmers.

It's a question being asked across the developing world.

Preparing for El Niño is daunting even in good times. The natural phenomenon scrambles global weather in ways both predictable and economically devastating. It typically causes droughts in Latin America and southern Africa that hit one group above all: poor farmers who are at the mercy of the skies.

This year, preparation is even tougher. The United States' war in Iran is making fertiliser and fuel much costlier. Deep cuts in international aid by the United States and other countries mean that funding to the poorest countries in sub-Saharan Africa has cratered to the lowest level since the early 2000s.

In June, the United Nations launched an El Niño plan to help 22 countries — including Malawi — considered particularly vulnerable. But fundraising shortfalls have prevented work in Malawi and six other nations from starting. And planting season begins now.

Malawi's government has designed its own El Niño plan with dozens of objectives. That's why government officials were in the village of Namasoko a few weeks ago—spreading the word about El Niño and telling people to buy faster-growing corn seeds.

But only about a third of Malawi's plan is funded. And so far, no money has been dedicated to helping farmers buy the seeds they need, one of the plan's goals.

"If the budget for this is zero", as farmers begin to plant, said Jacob Nyirongo, CEO of the Farmers Union of Malawi, "you already know it won't be enough to make a dent."

Namasoko is just one among hundreds of Malawian villages dependent on rain-fed agriculture. Several weeks after the meeting under the mango tree, the village chief, Gibson Bonongwe, said he didn't know one person among Namasoko's population of 2,860 who had been able to purchase the hybrid seeds. The same goes for fertiliser, which costs $115 for a 15-kilogram bag. "This is a price they cannot afford," he said.

Not for lack of trying. One farmer there, Felix James Mankhanamba, 35, described how he's been biking to Mozambique—across an international border—to buy potatoes he can sell back in town for about an $8 profit. The ride takes 16 hours round trip.

Farmers without the hybrid seeds will most likely plant seeds recycled from their previous harvests. That's their usual practice. But those seeds don't have the same predictability or yields.

It could work. But in previous El Niño years, like 2015-16 and 2023-24, it didn't.

Those events led to two of Malawi's worst staple-grain harvests over the past 20 years. In both instances, hunger levels soared.

This year's El Niño is emerging as the strongest on record, which could further intensify extreme heat waves, floods, and droughts. The International Food Policy Research Institute projects that Malawi could have an extra 4.6 million people, or 20% of the population, become undernourished.

Preparing for an El Niño requires not just studying where the rain might stop, but knowing which places have lost their ability to cope. On the United Nations' map of El Niño risk, much of Malawi is coloured a burning red.

It is one of the 10 poorest countries in the world. The dearth of resources shows up even in an elementary school in Namasoko, where 200 students sit on the floor in front of one teacher. And Malawi has been pummeled by disasters as global temperatures rise.

Cyclone Idai in 2019 damaged 300,000 homes and destroyed half the maize fields in the country's southern tip. Cyclone Freddy followed four years later, dumping a year's worth of rain in four days and killing 679 people. Then in 2024, an El Niño-fueled drought prompted the government to declare a state of emergency across much of the country.

Each of these disasters left impossible bills for recovery and reconstruction—$390 million, $680 million, $446 million—in a country that spends half its revenue on debt payments. Malawi now lacks the funds to stock gasoline stations with fuel.

"A constant erosion," Malawi's government put it in one report.

In trying to warn about this year's El Niño, Malawi is taking precisely the steps that an agriculture-dependent nation should, experts say. Preparation is crucial at a time of reduced international aid because it can limit spiralling costs after a disaster strikes, the U.N. has said.

"The government has taken this seriously," said Lucy Bandazi, a spokesperson for Malawi's Department of Disaster Management Affairs.

But awareness doesn't do much if people don't have the means to act.

Justin Saidi, Malawi's chief secretary, said in an interview that the government has been appealing to development banks, as well as governments including Britain and Australia, and "we are hopeful" the El Niño plan can be fully implemented. The plan calls for constructing livestock watering points, stockpiling food in vulnerable areas and distributing pesticides to control outbreaks that are more likely during drought.

Malawi also has an annual program, in place regardless of climate conditions, that aims to subsidise fertiliser and seeds for roughly 1 million farmers. But in recent years, the government program has faced delays in importing some fertiliser, meaning it comes too late to help, said Nyirongo, the farmers' union head. Malawi's Agriculture Ministry did not respond to a request for comment.

In Namasoko, after officials issued the warning, residents said there were few signs of government help. Bonongwe, the chief, said 20 farmers had received coupons.

The power of a disaster to derail people's lives is obvious in and around Namasoko. In 2023, waters from Cyclone Freddy cascaded down a mountain, tearing through town in what one resident described as a "porridge of mud and stone." The flood washed away the brick home of Enock John, 63, along with the possessions inside, and sent him and his family on a years-long recovery saga.

They spent a month sleeping in a church. Months more under a tent. A few years squatting on his brother's property. Clawing back money by growing rice. But even then, they managed to raise enough money to start rebuilding the family home — $345 for bricks, $230 for labour — only because a nongovernmental organisation offered some cash.

One recent afternoon, John stood surveying the construction. Workers climbed scaffolding and scraped cement, and John, almost giddy, joked about his wealth to several neighbours. The roof would come on in five days. The end of the journey.

"It was very difficult," he said.

This time, he'd planted a row of trees between his home and the mountain, perhaps enough to protect against a future flood, he said.

But it was the last of his money. He had nothing left to deal with a coming drought.

The New York Times

ಫಂಗಾಯ್ಡ್ ಫ್ರಾಗ್ (ಬುಗುಟು ಕಪ್ಪೆ) ಪತ್ತೆ

ಹಿರೇಬಾಗೇವಾಡಿ (ಬೆಳಗಾವಿ ಜಿಲ್ಲೆ): ಪಶ್ಚಿಮಘಟ್ಟ ಪ್ರದೇಶದಲ್ಲಿ ಕಂಡುಬರುವ 'ಫಂಗಾಯ್ಡ್ ಫ್ರಾಗ್' (ಬುಗುಟು ಕಪ್ಪೆ) ಹೆಸರಿನ ಕಪ್ಪೆಯೊಂದು ಇಲ್ಲಿನ ಸಿದ್ದನಬಾವಿ ಗ್ರಾಮದ ಜಮೀನಿನ ಕೃಷಿ ಹೊಂಡದಲ್ಲಿ ಪತ್ತೆಯಾಗಿದೆ.

ಫಂಗಾಯ್ಡ್ ಕಪ್ಪೆ ವರ್ಣರಂಜಿತ ಮತ್ತು ವಿಶಿಷ್ಟ ಉಭಯವಾಸಿ. ಇದರ ವೈಜ್ಞಾನಿಕ ಹೆಸರು ಹೈಡ್ರೋಫಿಲಾಕ್ಸ್ ಮಲಬಾರಿಕಸ್ ಮತ್ತು ಇದನ್ನು 'ಮಲಬಾರ್ ಹಿಲ್ಸ್ ಫ್ರಾಗ್' ಎಂದೂ ಕರೆಯುತ್ತಾರೆ.

ಈ ಕಪ್ಪೆಯ ಮೇಲ್ಭಾಗ ಕಂದು-ಕೆಂಪು ಬಣ್ಣದಿಂದ ಗಾಢ ಕಡುಗೆಂಪು ಬಣ್ಣದ ವರೆಗೆ ಇರುತ್ತದೆ. ದೇಹದ ಬದಿಗಳಲ್ಲಿ ಮತ್ತು ಮೇಲ್ಮೈಯ ಮೇಲೆ ಬಿಳಿ ಚುಕ್ಕೆಗಳಿರುತ್ತವೆ. ಚರ್ಮ ನಯವಾಗಿದ್ದು, ಕಣ್ಣಿನ ಕೆಳಭಾಗದಿಂದ ಭುಜದವರೆಗೆ ಗ್ರಂಥಿಗಳ ಮಡಿಕೆಗಳು ಕಂಡುಬರುತ್ತವೆ. ಶಿಲೀಂಧ್ರದಂತೆ ಕಾಣುವುದರಿಂದ 'ಫಂಗಾಯ್ಡ್ ಫ್ರಾಗ್' ಎಂಬ ಹೆಸರು ಬಂದಿದೆ ಎಂದು ಜೀವ ವೈವಿಧ್ಯ ಅಧ್ಯಯನ ಕಾರ ಮಂಜುನಾಥ ಅವರು ತಿಳಿಸಿದ್ದಾರೆ.



ಫಂಗಾಯ್ಡ್ ಫ್ರಾಗ್

Dec Hrd pg 10